# IMPOSITION OF PENALTY-MAJOR AND MINOR PENALTIES

| Sl.No | Date | Type | File No | Subject |
|---|---|---|---|---|
| 1. | 5.7.1985 | Official Memorandum | DPAR 14 SDE 85 | Withholding of special increments such as stagnation increment or increment for passing departmental examinations as a measure of penalty under Rule 8 of the K.C.S (C.C.A) Rules, 1957-clarification regarding. |
| 2. | 21.03.1992 | Circular | ಸಿಆಸುಇ 06 ಎಸ್ ಡಿಇ 91 | ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು1957-ಆಪಾದಿತ ನೌಕರನಿಗೆ ಕಠಿಣ ದಂಡನೆಯನ್ನು ವಿಧಿಸುವ ಬಗ್ಗೆ ಸ್ಪಷ್ಟನೆಗಳು |
| 3. | 14.09.2001 | Circular | ಡಿಪಿಎಆರ್ 18 ಸೇಇವಿ 2001, | ಸರ್ಕಾರಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದ ದಂಡನೆಗಳ ಕುರಿತು |

## GOVERNMENT OF KARNATAKA

No.DPAR 14 SDE 85

Karnataka Government Secretariat,
Vidhana Soudha
Bangalore, Dated 5th July 1985

## OFFICIAL MEMORANDUM

**Sub:** Withholding of special increments such as stagnation increment or increment for passing departmental examinations as a measure of penalty under Rule 8 of the Karnataka Civil Services (CCA) Rules, 1957 - Clarification regarding.

*****

Under rule 8 of the Karnataka Civil Services (Classification, Control and Appeal) Rules, 1957 "withholding of increments" is one of the penalties which may be imposed on a Government Servant for good and sufficient reasons.

2. Whether the increments referred to in the aforesaid rules shall also include increments such as stagnation increments and additional increments for passing departmental examinations granted to Government Servants, has been examined.

3. It is hereby clarified that taking the structure of increment as a whole, the increment referred to in rule 8 of the said rules refers to normal increments in time-scale of any posts and does not include special increments such as stagnation increment or increment for passing departmental examinations. Hence the increment other than the normal increment cannot be withheld as a measure of penalty under the Karnataka Civil Services (Classification, Control and Appeal) Rules, 1957. In cases where the penalty of withholding of increments cannot be imposed as a measure of penalty on a Government Servant for the reason that he has already reached the maximum of the pay scale, the disciplinary authority may consider the question of imposing any other minor penalties including the reduction to a lower stage in a time-scale of pay.

4. The Secretaries to Government and Heads of Departments are requested to bring these instructions to the notice of all the appointing authorities and other disciplinary authorities under their administrative control for guidance.

sd/-
**M.M. Naik**
Joint Secretary to Government Department and
Personnel and Admnv. Reforms
(Service Rules)

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 06 ಎಸ್‌ಡಿಇ 91

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 21.03.1992

**ಸುತ್ತೋಲೆ**

**ವಿಷಯ:** ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ಆಪಾದಿತ ನೌಕರನಿಗೆ ಕಠಿಣ ದಂಡನೆಯನ್ನು ವಿಧಿಸುವ ಬಗ್ಗೆ ಸ್ಪಷ್ಟನೆಗಳು.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಡಿಪಿಎಆರ್ 8 ಎಸ್‌ಡಿಇ 82 ದಿನಾಂಕ: 28.04.82 ಮತ್ತು 17.7.82
2. ಸುತ್ತೋಲೆ ಸಂಖ್ಯೆ: ಡಿಪಿಎಆರ್ 25 ಎಸ್‌ಡಿಇ 84, ದಿನಾಂಕ: 27.07.87

*****

ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ 8ನೇ ನಿಯಮದಲ್ಲಿ ನಮೂದಿಸಿರುವ (v) ರಿಂದ (viii) ರ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ಆಪಾದಿತ ನೌಕರನಿಗೆ ವಿಧಿಸುವ ಮೊದಲು ಶಿಸ್ತು ಪ್ರಾಧಿಕಾರವು ಆಪಾದಿತ ನೌಕರನಿಗೆ ಎರಡನೇ ಷೋಕಾಸ್ ನೋಟೀಸ್ ನೀಡುವ ವಿಷಯದಲ್ಲಿ ಅನುಸರಿಸಬೇಕಾದ ಕ್ರಮವನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ನೀಡಲಾಗಿದೆ.

ಈ ಸುತ್ತೋಲೆಗಳಲ್ಲಿರುವ ಸೂಚನೆಗಳನ್ನು ಎ.ಐ.ಆರ್.1986 ಎಸ್.ಸಿ.1173 ರಲ್ಲಿ ಪ್ರಕಟವಾಗಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪು ಮತ್ತು ಐ.ಎ.ಆರ್.1986 ಕರ್ನಾಟಕ 2245ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ನೀಡಲಾಗಿದೆ.

ಆದರೆ ತದನಂತರ ಸರ್ವೋನ್ನತ ನ್ಯಾಯಾಲಯವು 1991(1) ಎಸ್.ಎಲ್.ಆರ್.159ರಲ್ಲಿ ಪ್ರಕಟವಾಗಿರುವ ಭಾರತ ಸರ್ಕಾರ ವರ್ಸಸ್ ರಮಜಾನ್ ಮೊಹಮ್ಮದ್ ಖಾನ್ ಅವರ ಪ್ರಕರಣದಲ್ಲಿ ನೀಡಲಾದ ತೀರ್ಪಿನಲ್ಲಿ ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ; 606:9 (ಶ್ರೀ ಮಳಿಮಾಸ್ತಯ್ಯ-ವರ್ಸಸ್-ಕರ್ನಾಟಕ)ದಲ್ಲಿ ಶಿಸ್ತು ಪ್ರಾಧಿಕಾರಿಯ ಹೊರತಾಗಿ ಬೇರೆ ಪ್ರಾಧಿಕಾರಿಯು ಇಲಾಖಾ ವಿಚಾರಣೆಯನ್ನು ನಡೆಸಿದ ಪ್ರಕರಣಗಳಲ್ಲಿ ಆಪಾದಿತ ಸರ್ಕಾರಿ ನೌಕರನಿಗೆ ಸಿ.ಸಿ.ಎ ನಿಯಮಾವಳಿಯ ಪ್ರಕಾರ ಕಠಿಣ ದಂಡನೆಯನ್ನು ವಿಧಿಸುವ ಮುನ್ನ ವಿಚಾರಣಾ ಪ್ರಾಧಿಕಾರಿ ವರದಿಯ ಪ್ರತಿಯನ್ನು ಒದಗಿಸಬೇಕೆಂದು ತೀರ್ಪು ನೀಡಿದೆ.

ಆದ್ದರಿಂದ ಮೇಲ್ಕಂಡ ತೀರ್ಪುಗಳ ಹಿನ್ನೆಲೆಯಲ್ಲಿ ಉಲ್ಲೇಖದಲ್ಲಿ ನಮೂದಿಸಿದ ಸುತ್ತೋಲೆಗಳಲ್ಲಿ ನೀಡಲಾದ ಸೂಚನೆಗಳನ್ನು ಭಾಗಶಃ ಮಾರ್ಪಡಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ:-

"ಇಲಾಖಾ ವಿಚಾರಣೆಯನ್ನು ಶಿಸ್ತು ಪ್ರಾಧಿಕಾರಿಯ ಹೊರತಾಗಿ ಬೇರೆ ಪ್ರಾಧಿಕಾರಿಗಳು ನಡೆಸಿದ ಸಂದರ್ಭದಲ್ಲಿ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8ರ ಅಡಿಯಲ್ಲಿಯ (v) ರಿಂದ (viii)ರಲ್ಲಿನ ಕಠಿಣ ದಂಡನೆಯನ್ನು ಆಪಾದಿತ ನೌಕರನಿಗೆ ವಿಧಿಸುವ ಮೊದಲು ಶಿಸ್ತು ಪ್ರಾಧಿಕಾರಿಯು ವಿಚಾರಣಾ ಅಧಿಕಾರಿಯ ವಿಚಾರಣಾ ವರದಿಯ ಪ್ರತಿಯನ್ನು ಆತನಿಗೆ ಒದಗಿಸಿ ಆಪಾದಿತ ನೌಕರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸಮಯಾವಕಾಶವನ್ನು ಕೊಟ್ಟು ಮುಂದಿನ

ಕ್ರಮ ತೆಗೆದುಕೊಳ್ಳಬೇಕು. ಆದರೆ ಶಿಸ್ತು ಪ್ರಾಧಿಕಾರಿಯು ತಾನು ಆಪಾದಿತ ನೌಕರನಿಗೆ ವಿಧಿಸಲು ಉದ್ದೇಶಿಸಿದ ದಂಡನೆಯನ್ನು ಆಪಾದಿತ ನೌಕರನಿಗೆ ತಿಳಿಸುವ ಅವಶ್ಯಕತೆ ಇರುವುದಿಲ್ಲ.

ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿಗಳು ಮತ್ತು ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಈ ಸುತ್ತೋಲೆಯಲ್ಲಿರುವ ಸೂಚನೆಗಳನ್ನು ತಮ್ಮ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಶಿಸ್ತು ಪ್ರಾಧಿಕಾರಿಗಳ ಗಮನಕ್ಕೆ ತರತಕ್ಕದ್ದು ಹಾಗೂ ಪಾಲಿಸತಕ್ಕದ್ದು.

**ಸಹಿ/-**
**ಮೋತಿರಾಮ್ ಪವಾರ್,**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಸೇವಾ ನಿಯಮಗಳು)

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ**

**ಸುತ್ತೋಲೆ**

**ಸಂಖ್ಯೆ: ಸಿಆಸುಇ 18 ಸೇಇವಿ 2001, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್ 2001**

**ವಿಷಯ:** ಸರ್ಕಾರಿ ನೌಕರರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದ ದಂಡನೆಗಳ ಕುರಿತು.

1. ಸರ್ಕಾರಿ ನೌಕರನು ಸೇವೆಯಲ್ಲಿರುವಾಗ ಎಸಗುವ ಅಪರಾಧಗಳ ಕುರಿತು ವಿಚಾರಣೆ ನಡೆಸಿ, ಸಾಬೀತಾದ ಪ್ರಕರಣಗಳಲ್ಲಿ ಆರೋಪಿ ನೌಕರನಿಗೆ ವಿಧಿಸಬಹುದಾದಂತಹ ದಂಡನೆಗಳ ಬಗ್ಗೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8ರಲ್ಲಿ ನಿರ್ದಿಷ್ಟಪಡಿಸಲಾಗಿದೆ. ಆದರೆ, ಸದರಿ ನಿಯಮದಲ್ಲಿ ಯಾವ ಆರೋಪಕ್ಕೆ ಯಾವ ಶಿಕ್ಷೆಯನ್ನು ವಿಧಿಸಬಹುದು ಎಂಬುದನ್ನು ನಿಗದಿಪಡಿಸಿರುವುದಿಲ್ಲ. ಇದರಿಂದಾಗಿ ಕೆಲವು ಸಂದರ್ಭಗಳಲ್ಲಿ ಆರೋಪದ ತೀವ್ರತೆಗಿಂತ ವಿಧಿಸಲಾದ ದಂಡನೆಗಳು ಕಡಿಮೆ ಅಥವಾ ಹೆಚ್ಚಿನದಾಗುವ ಸಾಧ್ಯತೆ ಇದೆ. ಅಲ್ಲದೆ, ವಿವಿಧ ಶಿಸ್ತು ಪ್ರಾಧಿಕಾರಗಳು, ಹೋಲಿಸಬಹುದಾದಂತಹ ತೀವ್ರತೆಯನ್ನು ಹೊಂದಿದ ಆರೋಪಗಳ ಪ್ರಕರಣಗಳಲ್ಲಿ ಬೇರೆ ಬೇರೆ ದಂಡನೆಗಳನ್ನು ವಿಧಿಸುವ ಸಾಧ್ಯತೆಯೂ ಇರುತ್ತದೆ. ಆದುದರಿಂದ, ಸರ್ಕಾರವು ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾಬೀತಾದಂತಹ ಆರೋಪಗಳಿಗನುಗುಣವಾಗಿ ವಿಧಿಸಬಹುದಾದಂತಹ ದಂಡನೆಗಳ ಉದಾರಣೆಗಳನ್ನು ಈ ಕೆಳಗೆ ನಮೂದಿಸಿದೆ:-

| ಕ್ರ.ಸ. | ಸಾಬೀತಾದಂತಹ ಆರೋಪದ ಸ್ವರೂಪ | ವಿಧಿಸಬಹದಾದಂತಹ ದಂಡನೆ |
|---|---|---|
| 1 | ಒಂದು ತಿಂಗಳಿಗೆ ಮೇಲ್ಪಟ್ಟು, ಆದರೆ, ನಾಲ್ಕು ತಿಂಗಳಿಗಿಂತ ಕಡಿಮೆ ಅವಧಿಯ ಅನಧಿಕೃತ ಗೈರು ಹಾಜರಿ. | ಮೂರು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. |
| 2 | ನಾಲ್ಕು ತಿಂಗಳು ಮೀರಿದ ಅನಧಿಕೃತ ಗೈರು ಹಾಜರಿ. | ಸೇವೆಯಿಂದ ತೆಗೆದು ಹಾಕುವುದು. |
| 3 | ರೂ. 10,000 ಕ್ಕಿಂತ ಕಡಿಮೆ ಮೊತ್ತದ ತಾತ್ಕಾಲಿಕ ಹಣ ದುರುಪಯೋಗ | 5 ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 4 | ರೂ. 10,000 ಕ್ಕಿಂತ ಅಧಿಕ ಮೊತ್ತದ ತಾತ್ಕಾಲಿಕ ಹಣ ದುರುಪಯೋಗ | ಕಾಲವೇತನ ಶ್ರೇಣಿಯ ಹುದ್ದೆಯ ಕೆಳಗಿನ ಹಂತಕ್ಕೆ ಇಳಿಸುವುದು. |
| 5 | ಸರ್ಕಾರಿ ಹಣದ ದುರುಪಯೋಗ: ತಪ್ಪು ಬಳಕೆ | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 6 | ಕಾರ್ಯವಿಧಾನದ ಲೋಪಗಳು | ಮೊದಲ ಸಂದರ್ಭದಲ್ಲಿ ವಾಗ್ದಂಡನೆ ಮತ್ತು ಎರಡು ಮತ್ತು ನಂತರದ ಸಂದರ್ಭಗಳಲ್ಲಿ ಕಾಲವೇತನ ಶ್ರೇಣಿಯಲ್ಲಿ ಕೆಳಗಿನ ಹಂತಕ್ಕೆ ಇಳಿಸುವುದು. |

| | | |
|---|---|---|
| 7 | ಕಛೇರಿ ಕಾರ್ಯವಿಧಾನ ಕೈಪಿಡಿ ಇತ್ಯಾದಿಯಲ್ಲಿ ನಿರ್ದಿಷ್ಟಪಡಿಸಿರುವ ಕಾಲಮಿತಿಯ ಸಕಾರಣದಲ್ಲದ (ಅಸಮಂಜಸ) ವಿಳಂಬ | ಮೊದಲ ಸಂದರ್ಭದಲ್ಲಿ ವಾಗ್ದಂಡನೆ, ಎರಡು ಮತ್ತು ನಂತರದ ಸಂದರ್ಭಗಳಲ್ಲಿ ಕನಿಷ್ಟ ಪಕ್ಷ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯುವುದು. |
| 8 | ಲೈಂಗಿಕ ಕಿರುಕುಳ | ಕೆಳಮಟ್ಟದ ಕಾಲವೇತನ ಶ್ರೇಣಿ ಅಥವಾ ಹುದ್ದೆಗೆ ಇಳಿಸುವುದು. |
| 9 | ಮೇಲಾಧಿಕಾರಿಗಳ ಲಿಖಿತ ಸೂಚನೆಗಳನ್ನು ಪಾಲಿಸಲು ನಿರಾಕರಣೆ. | ಎರಡು ವಾರ್ಷಿಕ ಬಡ್ತಿಗಳನ್ನು ತಡೆ ಹಿಡಿಯುವುದು. |
| 10 | ಕುಟುಂಬದ ಸದಸ್ಯರೊಬ್ಬರಿಗೆ ಯಾವುದೇ ಕಂಪನಿ ಅಥವಾ ಸಂಸ್ಥೆಯಲ್ಲಿ ಉದ್ಯೋಗಗಳಿಸಿಕೊಳ್ಳಲು ಅಧಿಕಾರ ಸ್ಥಾನವನ್ನು ಉಪಯೋಗಿಸಿಕೊಳ್ಳುವುದು ಅಥವಾ ವರ್ಚಸ್ಸನ್ನು ಬೀರುವುದು. | ಕಾಲವೇತನ ಶ್ರೇಣಿಯಲ್ಲಿನ ಕೆಳಗಿನ ಹಂತಕ್ಕೆ ಇಳಿಸುವುದು. |
| 11 | ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಸರ್ಕಾರಿ ನೌಕರನ ಸ್ವಹಿತಾಸಕ್ತಿ ಒಳಗೊಂಡ ಯಾವುದೇ ಕಂಪನಿ ಅಥವಾ ಸಂಸ್ಥೆಗೆ ಅಥವಾ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ವ್ಯವಹರಿಸುವುದು ಅಥವಾ ಯಾವುದೇ ಗುತ್ತಿಗೆಯನ್ನು ಕೊಡುವುದು ಅಥವಾ ಮಂಜೂರು ಮಾಡುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 12 | ಕೆ.ಸಿ.ಎಸ್.(ನಡತೆ) ನಿಯಮಗಳು, 1966ರಲ್ಲಿನ ಅವಕಾಶಗಳನ್ನು ಉಲ್ಲಂಘಿಸಿ ರಾಜಕೀಯ ಅಥವಾ ಚುನಾವಣೆಗಳಲ್ಲಿ ಭಾಗವಹಿಸವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 13 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶಗಳನ್ನು ಉಲ್ಲಂಘಿಸಿ ಮುಷ್ಕರ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸವುದು. | ಕಾಲವೇತನ ಶ್ರೇಣಿಯಲ್ಲಿನ ಕೆಳಗಿನ ಹಂತಕ್ಕೆ ಇಳಿಸುವುದು. |
| 14 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶಗಳನ್ನು ಉಲ್ಲಂಘಿಸಿ ಆಕಾಶವಾಣಿ, ಪತ್ರಿಕೆ, ದೂರದರ್ಶನ ಮೊದಲಾದ ಬೃಹತ್ ಮಾಧ್ಯಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು. | ಕನಿಷ್ಟ ಪಕ್ಷ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 15 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶಗಳನ್ನು ಉಲ್ಲಂಘಿಸಿ ಸರ್ಕಾರವನ್ನು ಟೀಕಿಸುವುದು. | ಕನಿಷ್ಟ ಪಕ್ಷ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 16 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶವನ್ನು ಉಲ್ಲಂಘಿಸಿ ವಂತಿಗೆಯನ್ನು ಸ್ವೀಕರಿಸುವುದು ಅಥವಾ ಬೇರೆ ರೀತಿಯಲ್ಲಿ ನಿಧಿ ಸಂಗ್ರಹಿಸಲು, ನಿಧಿ ಸಂಗ್ರಹಣೆ ಕಾರ್ಯದಲ್ಲಿ ಪಾಲ್ಗೊಳ್ಳುವುದು, ಅಥವಾ ಇತರೆ ಸಂಗ್ರಹಣೆಗಳು ನಗದು ಅಥವಾ ಇತರೆ ರೂಪ | ಕಾಲವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ಇಳಿಸುವುದು. |

| | | |
|---|---|---|
| 17 | ವರದಕ್ಷಿಣೆಯನ್ನು ಕೊಡುವುದು: ತೆಗೆದುಕೊಳ್ಳುವುದು ಅಥವಾ ತೆಗೆದುಕೊಳ್ಳುವುದಕ್ಕೆ ಉತ್ತೇಜಿಸುವುದು. | ಸರ್ಕಾರಿ ಸೇವೆಯಿಂದ ತೆಗೆದು ಹಾಕುವುದು. |
| 18 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ವ್ಯವಹಾರ ಅಥವಾ ವ್ಯಾಪಾರಗಳಲ್ಲಿ ಅಥವಾ ಯಾವುದೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 19 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶಗಳನ್ನು ಉಲ್ಲಂಘಿಸಿ, ಬಂಡವಾಳ ಹೂಡಿಕೆ ಮಾಡುವುದು, ಸಾಲವನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು. | ಕಾಲವೇತನ ಶ್ರೇಣಿಯ ಕೆಳಗಿನ ಹಂತಕ್ಕೆ ಇಳಿಸುವುದು. |
| 20 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶಗಳನ್ನು ಉಲ್ಲಂಘಿಸಿ, ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಸಲ್ಲಿಸದಿರುವುದು. | ಕನಿಷ್ಟ ಪಕ್ಷ ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯುವುದು. |
| 21 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಅವಕಾಶಗಳನ್ನು ಉಲ್ಲಂಘಿಸಿ, ಚರ ಮತ್ತು ಸ್ಥಿರ ಆಸ್ತಿಗಳ ವ್ಯವಹಾರ | ಒಂದು ವಾರ್ಷಿಕ ವೇತನ ಬಡ್ತಿಯನ್ನು ತಡೆ ಹಿಡಿಯುವುದು. |
| 22 | ಕೆ.ಸಿ.ಎಸ್. (ನಡತೆ) ನಿಯಮಗಳು, 1966ರ ಉಪಬಂಧಗಳನ್ನು ಉಲ್ಲಂಘಿಸಿ, ಎರಡನೇ ಮದುವೆ ಮಾಡಿಕೊಳ್ಳುವುದು. | ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿ |
| 23 | ಸರ್ಕಾರದ ಸ್ಥಾಯಿ ಸೂಚನೆಗಳಿಗೆ ವಿರುದ್ಧವಾಗಿ ಸಿನಿಮಾ, ನಾಟಕ ಮುಂತಾದವುಗಳಲ್ಲಿ ಭಾಗವಹಿಸುವುದು ಒಳಗೊಂಡಂತೆ ತೊಡಗಿಸಿ ಕೊಳ್ಳುವುದು. | ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆ ಹಿಡಿಯುವುದು. |
| 24 | ಕೆ.ಸಿ.ಎಸ್. (ಕಾರ್ಯ ನಿರ್ವಹಣಾ ವರದಿ) ನಿಯಮಗಳು, 2000ದ ಅವಕಾಶಗಳನ್ನು ಉಲ್ಲಂಘಿಸಿ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಬರೆಯಲು ವಿಫಲರಾಗುವುದು. | ವಾಗ್ದಂಡನೆ(Censure) |

2. ಮೇಲಿನ ಪಟ್ಟಿಯಲ್ಲಿ ನಮೂದಿಸಲಾದ ಪ್ರಕರಣಗಳು ಉದಾಹರಣಾತ್ಮಕ (illustrative) ಆಗಿವೆಯೇ ಹೊರತು, ಅವುಗಳು ವ್ಯಾಪಕವಾಗಿ (exhaustive)ಇರುವುದಿಲ್ಲ. ಅವುಗಳಲ್ಲಿ ಸೇರಿಸದೇ ಇರುವ ಪ್ರಕರಣಗಳಲ್ಲಿ ಯಾವ ದಂಡನೆಯನ್ನು ವಿಧಿಸಬಹುದೆನ್ನುವ ಬಗ್ಗೆ, ಸಂಬಂಧಿಸಿದ ಶಿಸ್ತಿನ ಪ್ರಾಧಿಕಾರ, ಅವುಗಳನ್ನು ಗನಮದಲ್ಲಿಟ್ಟುಕೊಂಡು ತೀರ್ಮಾನಿಸಬೇಕು.

3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು ಈ ಸೂಚನೆಗಳನ್ನು ಪಾಲಿಸಲು ಹಾಗೂ ಅವುಗಳನ್ನು ಅವರವರ ಅಧೀನದಲ್ಲಿ ಬರುವ ಎಲ್ಲಾ ನೇಮಕಾತಿ: ಶಿಸ್ತು ಪ್ರಾಧಿಕಾರಗಳ ಗಮನಕ್ಕೆ ಪಾಲನೆಗಾಗಿ ತರಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಕೆ.ಎಲ್, ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು),